■ ವಿಶಾಖ ಎನ್.

# ಶಾರುಖ್ ಸಿನಿಮಾಗೆ ಒಲ್ಲೆನೆಂದ ಅಲ್ಲು

ಅಲ್ಲು ಅರ್ಜುನ್ ಈಗ ವಿಪರೀತ ವ್ಯಾಯಾಮ ಮಾಡುತ್ತಿದ್ದಾರೆ. 'ಪುಷ್ಪಾ' ಸಿನಿಮಾದ ಎರಡನೇ ಭಾಗದ ಮೇಲೆ ಜನರ ನಿರೀಕ್ಷೆಯ ಭಾರವೇ ಅದಕ್ಕೆ ಕಾರಣ. ಈ ಕಾಲಘಟ್ಟದಲ್ಲಿ ಅವರು ಬೇರೆ ಯಾವ ಸಿನಿಮಾಗಳ ಬಗೆಗೂ ತಲೆಕೆಡಿಸಿಕೊಳ್ಳುತ್ತಿಲ್ಲ. ಶಾರುಖ್ ಜೊತೆ ತೆರೆಮೇಲೆ ಕಾಣಿಸಿಕೊಳ್ಳುವ ಅವಕಾಶವನ್ನೂ ಅವರು ನಿರಾಕರಿಸಿದ್ದಾರೆ.

'ಜವಾನ್' ಹಿಂದಿ ಸಿನಿಮಾವನ್ನು ಶಾರುಖ್ ಖಾನ್ ಹಲವು ಮಾರುಕಟ್ಟೆ ತಂತ್ರಗಳೊಂದಿಗೆ ತೆರೆಗೆ ತರಲು ಹವಣಿಸುತ್ತಿದ್ದಾರೆ. ತಮಿಳಿನ ಅಟ್ಲೆ ಈ ಸಿನಿಮಾ ನಿರ್ದೇಶಕ. ನಯನತಾರಾ, ವಿಜಯ್ ಸೇತುಪತಿ ಇಬ್ಬರೂ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಶಾರುಖ್ ಖಾನ್ ಈ ಸಿನಿಮಾದಲ್ಲಿ ದಕ್ಷಿಣ ಭಾರತದ ಪ್ರತಿಭಾವಂತರನ್ನೆಲ್ಲ ಹೇಗೆ ದುಡಿಸಿಕೊಳ್ಳಹೊರಟಿದ್ದಾರೆ ಎನ್ನುವುದಕ್ಕೆ ಇವೆಲ್ಲ ಉದಾಹರಣೆಗಳು.

ನಿರ್ದೇಶಕ ಶಂಕರ್ ಗರಡಿಯಲ್ಲಿ ಪಳಗಿದ ಅಟ್ಲೆ 'ತೇರಿ' ತಮಿಳು ಸಿನಿಮಾ ಮೂಲಕ ಅಪರೂಪದ ಥ್ರಿಲ್ಲರ್ ಕೊಟ್ಟಿದ್ದರು. ಅದಾದ ಮೇಲೆ 'ಮರ್ಸೆಲ್' ಹಾಗೂ 'ಬಿಗಿಲ್' ಮೂಲಕ ನಟ ವಿಜಯ್ ಅವರನ್ನು ನೆಚ್ಚಿಕೊಂಡಿದ್ದರು. ಕೋವಿಡ್ ಕಾಲದಿಂದಲೇ ಶಾರುಖ್ ಹಾಗೂ ಅಟ್ಲೆ 'ಜವಾನ್' ಸಿನಿಮಾದ ಕೆಲಸಗಳನ್ನು ಚುರುಕಾಗಿ ಮಾಡತೊಡಗಿದ್ದರು.

ಅಲ್ಲು ಅರ್ಜುನ್ ಅವರಿಂದ ಸಣ್ಣದಾದರೂ ಪ್ರಮುಖ ತಿರುವು ನೀಡುವಂತಹ ಪಾತ್ರವೊಂದನ್ನು ಮಾಡಿಸಬೇಕು ಎನ್ನುವುದು ಅಟ್ಲೆ ಹಾಗೂ ಶಾರುಖ್ ಖಾನ್ ನಿರ್ಧಾರವಾಗಿತ್ತು. ಅವರ ಪಾತ್ರದ ಹೂರಣದ ಕುರಿತು ಮನವರಿಕೆ ಮಾಡಿಕೊಡುವ ಪ್ರಯತ್ನ ಕೂಡ ನಡೆದಿತ್ತು. ಇದುವರೆಗೆ ಒಂದೂ ಹಿಂದಿ ಸಿನಿಮಾದಲ್ಲಿ ಅಲ್ಲು ಅರ್ಜುನ್ ಅಭಿನಯಿಸಿಲ್ಲ. ಆದರೆ, 'ಪುಷ್ಪಾ' ಸಿನಿಮಾ ತೆರೆಕಂಡ ಮೇಲೆ ಅವರ ಹೆಸರು ದೇಶದ ಉದ್ದಗಲ ಅಭಿಮಾನಿಗಳನ್ನು ಗಿಟ್ಟಿಸಿಕೊಂಡಿದೆ. ಇದೇ ಮಾರುಕಟ್ಟೆಯನ್ನು ಬಂಡವಾಳವಾಗಿಸಿಕೊಳ್ಳಬೇಕೆನ್ನುವುದು ಶಾರುಖ್ ಅಭಿಲಾಷೆ. ಆದರೆ, ಅಲ್ಲು ಅರ್ಜುನ್ ಈ ಪಾತ್ರವನ್ನು ನಿರಾಕರಿಸಿದರು.

'ಪುಷ್ಪಾ' ಚಲನಚಿತ್ರದ ಎರಡನೇ ಭಾಗದಲ್ಲಿ ಇನ್ನೂ ಹೆಚ್ಚು ದೈಹಿಕ ಕ್ಷಮತೆಯನ್ನು ಅಲ್ಲು ಅರ್ಜುನ್ ಹೊಂದಬೇಕಾಗಿರುವುದರಿಂದ ನಡುವೆ ಇನ್ನೊಂದಿಷ್ಟು ಡೇಟ್ಸ್ ಅನ್ನು ಬೇರೆಯವರಿಗೆ ಕೊಡುವುದು ಕಷ್ಟವಾಗಿದೆ. ■





ವಿಜಯ್, ಲೋಕೇಶ್ ಕನಕರಾಜ್

# ಲಿಯೊದಲ್ಲಿ ತಾರಾ ಮೆರವಣಿಗೆ

ವಿಜಯ್, ತ್ರಿಶಾ, ಸಂಜಯ್ ದತ್, ಪ್ರಿಯಾ ಆನಂದ್, ಸ್ಯಾಂಡಿ, ಗೌತಮ್ ವಾಸುದೇವ್ ಮೆನನ್, ಮಿಷ್ಕಿನ್, ಮ್ಯಾಥ್ಯೂ ಥಾಮಸ್, ಅರ್ಜುನ್ ಸರ್ಜಾ, ಮನ್ಸೂರ್ ಅಲಿ ಖಾನ್... ಹೀಗೊಂದು ತಾರಾಬಳಗ ಇರುವ ತಮಿಳಿನ ಸಿನಿಮಾ ಬಗೆಗೆ ನಿರ್ದೇಶಕ ಲೋಕೇಶ್ ಕನಕರಾಜ್ ದೊಡ್ಡ ನಿರೀಕ್ಷೆ ಸೃಷ್ಟಿಸಿದ್ದಾರೆ. 'ಲಿಯೊ' ಸಿನಿಮಾದ ತಾರಾಬಳಗ ಇದು.

ಸ್ವತಃ ನಿರ್ದೇಶಕರಾಗಿ ತಮ್ಮತನದ ರುಜು ಮಾಡಿರುವ ಮಿಷ್ಕಿನ್ ಅವರಿಂದ ಲೋಕೇಶ್ ಕನಕರಾಜ್ ಪಾತ್ರವೊಂದನ್ನು ಮಾಡಿಸಿದ್ದಾರೆನ್ನುವುದು ವಿಶೇಷ. ಅವರೊಟ್ಟಿಗೆ ಕಳೆದ ಕ್ಷಣಗಳನ್ನು ಸಂಕ್ಷಿಪ್ತವಾಗಿ ಅವರು ಟ್ವೀಟ್ ಮಾಡಿದ್ದಾರೆ. 'ತಮ್ಮ ಜತೆ ಇಷ್ಟು ಹತ್ತಿರದಿಂದ ಕೆಲಸ ಮಾಡುವ ಸೌಭಾಗ್ಯ ನನ್ನದಾದದ್ದಕ್ಕೆ ಎಷ್ಟು ಧನ್ಯವಾದ ಹೇಳಿದರೂ ಸಾಲದು. ಧನ್ಯವಾದ ಎನ್ನುವುದನ್ನು ನಾನು ಹೇಳಲು ಸಾಧ್ಯವಿಲ್ಲವಾದರೂ ಮಿಲಿಯನ್‌ಗಟ್ಟಲೆ ಧನ್ಯವಾದಗಳು' ಎಂದು ಅವರು ಟ್ವೀಟ್ ಮಾಡಿದ್ದಾರೆ.

'ಮಾಸ್ಟರ್' ಸಿನಿಮಾ ಮೂಲಕ ವಿಜಯ್ ಹಾಗೂ ಲೋಕೇಶ್ ಕನಕರಾಜ್ ದೊಡ್ಡ ಹಿಟ್ ಕೊಟ್ಟಿದ್ದರು. ಅದರಲ್ಲಿ ವಿಜಯ್ ಸೇತುಪತಿ ಪ್ರತಿನಾಯಕನಾಗಿ ಜನಮನ ಗೆದ್ದಿದ್ದರು. 'ಲಿಯೊ' ಸಿನಿಮಾದಲ್ಲಿ ಅದಕ್ಕೂ ಮೀರಿದ ದೊಡ್ಡ ತಾರಾಬಳಗ ಇದ್ದು. ತೆರೆಮೇಲೆ ಯಾರು ಹೆಚ್ಚು ಮೋಡಿ ಮಾಡಲಿದ್ದಾರೆ ಎಂದು ಅಭಿಮಾನಿಗಳು ಈಗಾಗಲೇ ಕುತೂಹಲಿಗಳಾಗಿದ್ದಾರೆ.

ಸ್ಟಾರ್ ನಟರೊಟ್ಟಿಗೆ ಪ್ರತಿಭಾವಂತರನ್ನು ಬೆಸೆದು, ಜನರನ್ನು ಹಿಡಿದಿಟ್ಟುಕೊಳ್ಳುವಂಥ ಸಿನಿಮಾಗಳನ್ನು ಕೊಡುವ ಮಾದರಿಯೊಂದನ್ನು ಲೋಕೇಶ್ ಕನಕರಾಜ್ ಮುದ್ದಿಸುತ್ತಿದ್ದಾರೆ. ಕಮಲ್ ಹಾಸನ್ ಅಭಿನಯಿಸಿ, ನಿರ್ಮಿಸಿದ 'ವಿಕ್ರಮ್'ನಲ್ಲಿ ವಿಜಯ್ ಸೇತುಪತಿ ಹಾಗೂ ಫಹಾದ್ ಫಾಸಿಲ್ ಇದ್ದರು.

ತಮಿಳಿನಲ್ಲಷ್ಟೇ ಅಲ್ಲದೆ ಕನ್ನಡ, ಹಿಂದಿ, ತೆಲುಗು ಭಾಷೆಗಳಲ್ಲಿಯೂ 'ಲಿಯೊ' ಅಕ್ಟೋಬರ್‌ನಲ್ಲಿ ತೆರೆಕಾಣಲಿದೆ. ■